# ಅಧ್ಯಾಯ 48

## ಓಂ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ



ಛಂದ:-ಪಠಿಸೆ ಸಿದ್ಧಚರಿತ್ರವನು ಏಳು ದಿನಗಳೊಳು ಪ್ರೇಮದಿ ಕಠಿಣತರ ಭೂತದ ಮಹಾ
ಬಾಧೆಯ ಕಳೆಯುತತಿ ಸುಲಭದಿ ಮರಣ ಹೊಂದಿದ ಬಾಲೆಯನು ಸದ್ಗುರು ವಿಭೂತಿ
ಪ್ರಭಾವದಿ ಕರುಣೆಯಿಂದ ಬದುಕಿಸಿದ ಸನ್ಯಾಸಿಬಂದತಿ ತವಕದಿ..

ಬ್ರಹ್ಮಾನಂದ ಅವಿನಾಶಿಯಾಗಿರುವಂಥ ನೀನು

ಸಿದ್ಧರೂಪದಿಂದ ಅವತರಿಸಿರುತ್ತಿ. ಜೀವನ ಅಜ್ಞಾನ

ರಾತ್ರಿಯನ್ನು ಕಳೆದು ಆತನನ್ನು ಜ್ಞಾನ ಪ್ರಕಾಶದಲ್ಲಿಟ್ಟು

ಬಿಡುವಿ. ಸದ್ಗುರುವಿನ ಹೊರತು ಜೀವನು

ಅಸಹಾಯ್ಯನಾಗಿದ್ದಾನೆ. ಶಾಸ್ತ್ರಗಳನ್ನು ಪಠಿಸಿದರೂ

ಸತ್ಯಾರ್ಥವು ತಿಳಿಯಲಾಗದು. ಬ್ರಹ್ಮಭಾವವು ಹ್ಯಾಗೆ

ಹೊಂದತಕ್ಕದ್ದೆಂದು ಆ ಸದ್ಗುರು ದೇವನೇ

ಹೇಳಬೇಕಾಗಿರುವದು. ಸದ್ಗುರುವಿನ ವಿನಹಾ ಬೇರೆ ಗತಿಯೇ

ಇಲ್ಲ. ಅವನನ್ನು ಕುರಿತು ಶರಣು ಹೋಗದಿದ್ದರೆ ವ್ಯುತ್ಪತ್ತಿ

ವ್ಯರ್ಥವೇ ಸರಿ. ಸದ್ಗುರು ಮೂರ್ತಿಯು ಒಲಿಯದಿದ್ದರೆ,

ಇಹಪರದ ಸಂಪತ್ತಿಯಾದರೂ ನಿರುಪಯೋಗವಾಗಿರುವದು.

ಆ ಸದ್ಗುರುವನ್ನು ಸದ್ಭಾವದಿಂದ ನಮಿಸಿದರೆ, ಸಂಸಾರ

ಚಿಂತೆಯು ಸಮೂಲ ನಾಶವಾಗುತ್ತದೆ, ಮತ್ತು ಎಲ್ಲಾ

ಅಹಂಮಮತೆಯು ಲಯವಾಗಿ, ಮುಕ್ತಿ ಕಾಂತೆಯೇ

ವರಿಸುವಳು. ಸದ್ಗುರುರಾಯನನ್ನು ಮರೆಯುವಂಥವರಿಗೆ

ಸರ್ವ ಪ್ರಕಾರದ ವಿಪತ್ತಿಗಳು ಸಂಸಾರದಲ್ಲಿ ಪ್ರಾಪ್ತವಾಗುವವು,

ಆಮೇಲೆ ಅವರು ಸದ್ಗುರುವನ್ನು ಕುರಿತು ಶರಣು ಹೋಗುವರು. ಇರಲಿ, ಈಗ ಚರಿತ್ರೆ ಕಥನವನ್ನು ಶ್ರವಣ ಮಾಡುವಂಥವರಾಗಿರಿ, ಸದ್ಗುರುರಾಯನ ಚರಿತ್ರವು ಶ್ರವಣಕ್ಕೆ ಬಹು ಮಧುರವಾದದ್ದು, ಇಷ್ಟೇ ಅಲ್ಲಾ, ಅದನ್ನು ಕೇಳುವದರಿಂದ ಭವಬಂಧನವು ಹರಿದು ಹೋಗಿ ಜೀವನು ನಿತ್ಯಾನಂದವನ್ನು ಭೋಗಿಸುವನು. ಬಾಗಲಕೋಟೆಯೆಂಬ ನಗರದಲ್ಲಿ, ಶ್ರೀಮಂತ ಎಂಬ ಹೆಸರಿನ ಒಬ್ಬ ಗೌಡನಿರುವನು. ಆತನಿಗೆ ದ್ರವ್ಯ ಬಹಳ ಇರುವದು, ಆದರೆ ದೇವರನ್ನು ಭಜಿಸುತ್ತಿದ್ದಿಲ್ಲ. ಆತನು ರಾತ್ರಿ ಹಗಲು ದೊಡ್ಡ ವ್ಯವಹಾರದ ಚಿಂತೆ ಮಾಡುತ್ತಿದ್ದು, ಜನರಿಂದ ಕೊಡತಕ್ಕೊಳ್ಳುವದರ ಧ್ಯಾನವೇ ಅವನಿಗೆ ಯಾವಾಗಲೂ ಇರುವದು. ಆತನ ಮಗಳು ರುಕ್ಮಿಣಿಯಂಬವಳು ಬಹಳ ಸುಲಕ್ಷಣೆ ಮತ್ತು ಸದ್ಗುಣಮಣಿ ಇರುವಳು. ಆದರೆ ಇವಳಿಗೆ ಒಂದು ಭೂತ ಬಾಧೆ ಇರುವುದರಿಂದ ತಾಯಿ ತಂದೆಯವರಿಗೆ ಇದೊಂದು ದೊಡ್ಡ ಚಿಂತೆ ಇತ್ತು. ಒಮ್ಮೆ ಭೂತ ಬಂದು, ರುಕ್ಮಿಣಿಯು ಏನಾದರೂ ಬಡಬಡಿಸಿ, ತನಗೆ ವಿವಾಹ ಮಾಡುವದಿಲ್ಲವೆಂದು ತಂದೆ

ತಾಯಿಗಳಿಗೆ ಬೈಯುತ್ತಿದ್ದಳು. ಅವಳ ಈ ಸ್ಥಿತಿಯನ್ನು ನೋಡಿ, ಶ್ರೀಮಂತನು ಬಹಳ ಚಿಂತಾಕ್ರಾಂತನಾಗಿರುವಾಗ, ಅಕಸ್ಮಾತ್ ಅಲ್ಲಿಗೆ ಅಂಕಲಕೋಟೆ ಶರಣಪ್ಪನು ಬಂದನು. ಆತನು ಸಿದ್ಧಾರೂಢರ ನಿಕಟ ಭಕ್ತನಿರುತ್ತಿದ್ದು, ಸದ್ಗುರು ಕೀರ್ತಿಯನ್ನು ಊರೂರುಗಳಲ್ಲಿ ಕೀರ್ತನೆ ಮಾಡಿ ಪಸರಿಸುತ್ತಿರುವವನು. ಶ್ರೀ ಸಿದ್ದರ ಕೀರ್ತಿಯ ವಿನಃ ಜನರಿಗೆ ಮತ್ತೊಂದು ಹೇಳಲಾರನು. ರುಕ್ಮಿಣಿಯನ್ನು ನೋಡಿ, ಶರಣಪ್ಪನು ಶ್ರೀಮಂತನಿಗೆ -"ಇವಳ ದೆಶೆಯಿಂದ ನೀವು ಚಿಂತೆ ಮಾಡಬೇಡಿರಿ, ಇವಳು ಏಳು ದಿನ ತನಕ ಸಿದ್ಧ ಚರಿತ್ರವನ್ನು ಪಠಿಸಿದ್ದಾದರೆ, ಅದರಿಂದ ಸರ್ವ ಪೀಡೆಗಳು ನಿವಾರಣವಾಗುವವು. ನಿತ್ಯ ಸಿದ್ಧ ಸ್ಮರಣೆಯನ್ನು ಮಾಡಬೇಕು ಮತ್ತು ಆತನ ಪಾದೋದಕವನ್ನು ಸೇವಿಸಬೇಕು. ಈ ಪ್ರಕಾರ ಮಾಡಿದ್ದಾದರೆ ನಿಶ್ಚಯವಾಗಿ ಅಧಿಯು ನಿವಾರಣವಾಗುವದು," ಎಂದು ಅಂದದ್ದು ಕೇಳಿ, ಶ್ರೀಮಂತರು-ಬಹಳ ದ್ರವ್ಯ ಖರ್ಚು ಮಾಡಿದೆ ಅನೇಕ ಮಂತ್ರ ತಂತ್ರಗಳನ್ನು ಯೋಜಿಸಿದೆ, ಬಹಳ ದೇವರಿಗೆ ಹರಕೆ ಬೇಡಿಕೊಂಡೆ, ಆದರೆ ಅದೆಲ್ಲವೂ

ನಿಷ್ಫಲವಾಯಿತು. ಇಷ್ಟರಿಂದ ಗುಣ ಸಿಕ್ಕದಿರುವಾಗ, ಒಂದು ಪುಸ್ತಕ ಓದಿದ ಮಾತ್ರದಿಂದ ಏನಾದೀತು ?" ಎಂದು ಅಂದದ್ದು ಕೇಳಿ ಆತನನ್ನು ಕುರಿತು ಶರಣಪ್ಪನು - "ಎಲೈ ಶ್ರೀಮಂತನೇ, ಶ್ರೀ ಸಿದ್ಧಾರೂಢರ ಮಹಿಮೇ ನಿನಗೆ ಗೊತ್ತಿರುವುದಿಲ್ಲ. ಅದು ಅಗಾಧವಾಗಿಯೂ, ನಿರುಪಮವಾಗಿಯೂ ಇದ್ದು, ಅದರ ಪ್ರಭಾವಕ್ಕೆ ಸೀಮೆ ಇರುವುದಿಲ್ಲ. ಇದರ ಪ್ರತೀತಿಯು ನಮಗೆ ಪ್ರತ್ಯಕ್ಷ ಅನುಭವಕ್ಕೆ ಬಂದಿರುತ್ತದೆ. ಉಣಕಲ್ಲನಲ್ಲಿ ಇಬ್ಬರು ಸ್ತ್ರೀಯರಿಗೆ ಇದಕ್ಕೂ ವಿಶೇಷ

ಭೂತ ಬಾಧೆ ಇರುವಾಗ, ಸಿದ್ಧನಾಮ ಮತ್ತು ಕೀರ್ತಿಯು ಶ್ರವಣ ಮಾಡಿದಾಕ್ಷಣವೇ ಭೂತಗಳು ನಿಃಶೇಷವಾಗಿ ಬಿಟ್ಟು ಹೋದವು. ಸದ್ಭಾವದಿಂದೊಡಗೂಡಿ ಏಳು ದಿನ ಸದ್ಗುರು ನಾಮವನ್ನು ಜಪಿಸುತ್ತಿದ್ದು, ಆತನ ಕೀರ್ತಿಯನ್ನು ಶ್ರವಣಮಾಡುವದರಿಂದ, ಎಂಥಾ ಕಠಿಣ ಭೂತವಾದರೂ ಬಿಟ್ಟು ಹೋಗುವದು. "ಎಂದು ಹೇಳಿದ್ದನ್ನು ಕೇಳಿ, ಶ್ರೀಮಂತನು - "ಹಾಗಾದರೆ ರುಕ್ಕಿಣಿಯು ಚರಿತ್ರವನ್ನು ಓದಲಿ, ಪಾದೋದಕಕ್ಕೆ ಹ್ಯಾಗೆ ಮಾಡಲಿ ? ವ್ಯವಹಾರದ್ದಶೆಯಿಂದ

ಸಿದ್ಧಾರೂಢ ಸ್ಥಾನಕ್ಕೆ ಹೋಗಿ ಅವರ ದರ್ಶನ ಮಾಡಿಕೊಳ್ಳಲಿಕ್ಕೆ ನನಗೆ ವೇಳ್ಯ ಸಿಗುವದಿಲ್ಲ. ಹಾಗಾದರೆ ಹುಬ್ಬ ಳ್ಳಿಗೆ ಒಬ್ಬ ಮನುಷ್ಯನನ್ನು ಕಳುಹಿಸಿ ಪಾದೋದಕವನ್ನು ತರಿಸುವೆನು," ಎಂದು ಹೇಳಿದನು. ಶರಣಪ್ಪ ನು ಒಂದು ಚರಿತ್ರವನ್ನು ರುಕ್ಕಿ ಣಿಯ ಕೈ ಯಲ್ಲಿ ಕೊಟ್ಟು ಸಿದ್ಧನಾಮದ ಘೋಷಣೆ ಮಾಡಿದನು. ಅದನ್ನು ಕೇಳಿದ ಕೂಡಲೇ ಅವಳಿಗೆ ದೇಹದ ಮೇಲೆ ಸ್ಮೃ ತಿ ಬಂದು, ತನ್ನ ತಂದೆಯನ್ನು ಕುರಿತು, - "ಈ ಭಜನವು ನನಗೆ ಬಹಳ ಸುಖಕರವಾಗಿ ಕಾಣಿಸುತ್ತದೆ. ಅದನ್ನು ಕೇಳಿ ನನಗೆ ಬಹಳ ಸಂತೋಷವಾಗಿದೆ. ಅದನ್ನು ನಾನು ಸರ್ವದಾ ಮಾಡುತ್ತಿರುವೆನು," ಎಂದು ಅಂದಳು. ಆಮೇಲೆ ಶರಣಪ್ಪ ನು ರುಕ್ಮಿಣಿಗೆ - "ನೀನು ಇದೇ ನಾಮದಿಂದ ನಿತ್ಯಭಜನೆ ಮಾಡುತ್ತಿರು, ಇದರಿಂದ ನಿನಗಿರುವ ಎಲ್ಲಾ ಬಾಧೆಯು ಹೋಗುವುದು ಮತ್ತು ತಿರುಗಿ ಬರಲಾರದು," ಎಂದು ಹೇಳಿ ಅವಳ ಕಿವಿಯಲ್ಲಿ ಆ ನಾಮ ಮಂತ್ರವನ್ನು ಉಪದೇಶಿಸಿದನು, ಮತ್ತು ಚರಿತ್ರ ಪಠಣವನ್ನು ಮಾಡಲಿಕ್ಕೂ ಹೇಳಿದನು. ಇದರಿಂದ ಇವಳ ಮನಸ್ಸಿ ಗೆ ಆನಂದವಾಗಿ, -

“ಇದೇ ಪ್ರಕಾರ ನಾನು ನಡೆಯುವೆನು,” ಎಂದು ಹೇಳಿದಳು. ಶರಣಪ್ಪನು ಹೀಗೆ ಅವಳಿಗೆ ಉಪದೇಶವನ್ನು ಮಾಡಿ, ಅಲ್ಲಿಂದ ಹೊರಟು ಹೋದನು. ಶ್ರೀಮಂತನು ಸದ್ಗುರು ಪಾದ ತೀರ್ಥಕ್ಕೋಸ್ಕರ ಹುಬ್ಬಳ್ಳಿಗೆ ಒಬ್ಬ ಮನುಷ್ಯನನ್ನು ಕಳುಹಿಸಿದನು. ತೀರ್ಥವು ಬರುತ್ತಲೇ ಅದನ್ನು ರುಕ್ಮಿಣಿಗೆ ಕೊಟ್ಟನು, ಅದರ ಸೇವನೆಯಿಂದ ಅವಳ ಮನಸ್ಸು ಪೂರ್ಣ ಸ್ವಸ್ಥವಾಗಿ ಚರಿತ್ರ ಪಠಣವನ್ನೂ ನಿತ್ಯ ಸಪ್ರೇಮ ನಾಮಸ್ಮರಣೆಯನ್ನು ಆರಂಭಿಸಿದಳು. ಇದರಿಂದ ಭೂತವು ಸ್ಥಾನ ಬಿಟ್ಟು ಹೋಯಿತು. ಪುನಃ ಅವಳ ಕಡೆಗೆ ಬರಲೇ ಇಲ್ಲ. ಪೂರ್ವದಲ್ಲಿ ಅನುದಿನ ರುಕ್ಮಿಣಿಗೆ ಭೂತ ಸಂಚಾರವಾಗುತ್ತಿತ್ತು. ಈಗ ಏಳು ದಿನಗಳ ತನಕ ಅದರ ವರ್ತಮಾನವೇ ಇದ್ದಿಲ್ಲ. ಶ್ರೀಮಂತನಿಗಾದರೂ ಬಹು ಆನಂದವಾಗಿ, -“ಆಹಾ, ಚರಿತ್ರ ಪಠಣವು ಸುಖಕರವಾಯಿತು. ಈಗ ಸರ್ವರಲ್ಲಿಯೂ ಅಭೇದ ಭಾವನೆಯಿಂದ ವರ್ತಿಸುವ ಆ ಸದ್ಗುರು ಸಿದ್ಧಾರೂಢರ ಪಾದದರ್ಶನ ಪಡೆದುಕೊಳ್ಳಬೇಕು. ನನಗೆ ಅವರ ಮೇಲೆ ಶ್ರದ್ಧೆ ಇರಲಿಲ್ಲ. ಆದರೂ ನಮ್ಮ ಆಪತ್ತನ್ನು

ಪರಿಹಾರ ಮಾಡಿದರು. ಈಗ ರುಕ್ಮಿಣಿಯನ್ನು ಕರೆದುಕೊಂಡು ಆತನ ಪಾದಕ್ಕೆ ಶರಣು ಹೋಗಬೇಕು," ಎಂದು ನುಡಿದನು. ಚರಿತ್ರ ಪಠಣವು ಮುಗಿಯಿತು. ಆದರೆ ಆ ಕಾಲಕರ್ಮ ವಶವಾಗಿ ಏನು ಆಯಿತೆಂದರೆ - ಮಧ್ಯಾಹ್ನ ಕಾಲದಲ್ಲಿ ರುಕ್ಮಿಣಿಯು ಅಶ್ವತ್ಥದ ಕಟ್ಟೆಯ ಮೇಲೆ ಕುಳಿತಿದ್ದಳು. ಆ ಕಟ್ಟೆಯು ಉನ್ನತವಾಗಿದ್ದು, ಅಲ್ಲಿಂದ ರುಕ್ಮಿಣಿಯು ಕೆಳಗೆ ಇಳಿಯುತ್ತಿರುವಾಗ ಅಕಸ್ಮಾತ್ತಾಗಿ ಮಸ್ತಕ ಭ್ರಮಣವಾಗಿ ಕಲ್ಲಿಗೆ ಅಪ್ಪಳಿಸಿದಂತೆ ಬಿದ್ದಳು. ತಲೆಯು ಕಲ್ಲಿಗೆ ಬಡೆದು, ದರದರನೆ ರಕ್ತ ಹರಿಯಿತು. ಆಗ ತಂದೆಯು ಓಡಿ ಬಂದು ನೋಡುವಾಗ ಅವಳ ಪ್ರಾಣವು ಹೋಗಿತ್ತು. ಇದನ್ನು ನೋಡಿ ಬಹು ದುಃಖದಿಂದ ಆತನು, "ಹೇ ಸಿದ್ಧಾರೂಢನೇ, ಏನು ಮಾಡಿದಿ ನಿನ್ನ ಕೃಪೆಯಿಂದ ಭೂತವು ದೂರವಾಯಿತು. ಆದರೆ ಕೂಡಲೇ ನನ್ನ ಮಗುವೂ ಹೋಯಿತು. ಇದು ನಿನ್ನ ಕೀರ್ತಿಗೆ ಒಳ್ಳೇದಲ್ಲ, ನಿನ್ನ ಮೇಲೆ ನನ್ನ ಶ್ರದ್ಧೆ ಇರಲಿಲ್ಲ. ಆದರೂ ನಮ್ಮ ಆಪತ್ತನ್ನು ಪರಿಹರಿಸಿದಿ. ಈಗ ನನ್ನ ಪ್ರಿಯ ಪುತ್ರಿಯು ಸಾಯುವದರಿಂದ ನಿನ್ನ ಕೀರ್ತಿ ಬಾಧೆಯು ಬಂತು. ನಿನ್ನ ನಾಮವನ್ನು ಜಪಿಸುತ್ತ

ನಿನ್ನ  ಚರಿತ್ರವನ್ನು  ಪಠಿಸುತ್ತ ಇದ್ದು, ಅದು ಮುಗಿದ ಕೂಡಲೇ ಹುಡುಗಿಯು  ತೀರಿಸಿಕೊಂಡಳು. ಎಂದು ಜನರು ಅನ್ನುವರು. ಈ ಕಲಂಕವು ಯಾರಿಗೆ ಹತ್ತುವದು ? ನೀನು ಒಂದು ವೇಳೆ ಈಗ ಸುಮ್ಮನೆ ಇದ್ದು, ನನ್ನ ಈ ಮಗಳನ್ನು ಸಾಯಲಿಕ್ಕೆ ಬಿಟ್ಟರೆ, ನಿನ್ನ ಭಕ್ತಿ ಮಾಡುತ್ತಲೇ ಸಾಯುತ್ತಾರೆ, ಎಂದು ಜನರು ಅನ್ನುವರು. ಆದ್ದರಿಂದ ಹೇ ದಯಾಳುವೇ, ಬೇಗನೇ ಓಡಿ ಬಂದು, ನಿನ್ನ ಬಿರುದನ್ನು  ರಕ್ಷಿಸು. ನಿನ್ನನ್ನು  ಕುರಿತು, ಶರಣು ಬಂದಿದ್ದ ಈ ಮಗಳನ್ನು  ಕಾಲನ ಕೈಯಲ್ಲಿ ಕೊಡಬೇಡ", ಎಂದು ದೀರ್ಘಸ್ವರದಿಂದ ಶ್ರೀಮಂತರು ಅರಳುತ್ತಿರುವಾಗ ಅಲ್ಲಿ ಒಬ್ಬ ಸಾಧುವು  ಪ್ರಾಪ್ತನಾದನು. ಆತನ ಶಾಂತವಾದ ಮುಖವನ್ನು ನೋಡಿದಾಕ್ಷಣ, ಶ್ರೀಮಂತನು ಸ್ತಬ್ಧನಾದನು. ಆ ಸಾಧುವಿನ ಮಸ್ತಕಕ್ಕೆ  ಒಂದು ಕೆಂಪು ವಸ್ತುವು ಸುತ್ತಿದ್ದು, ಮೈಮೇಲೆ ಕ್ಯಾವಿ ಬಣ್ಣದ ಶ್ಯಾಲು  ಹೊತ್ತಿದ್ದನು. ಆತನ ಕಂಠದಲ್ಲಿ ರುದ್ರಾಕ್ಷಿ ಮಾಲೆಯೂ ವಾಮ ಹಸ್ತದಲ್ಲಿ ಕಮಂಡಲವೂ ಶೋಭಿಸುತ್ತಿದ್ದವು. ಈ ಪ್ರಕಾರವಿರುವ ಆ ದಿವ್ಯ ಸನ್ಯಾಸಿಯು ಬಂದು ಶ್ರೀಮಂತನನ್ನು  ಕುರಿತು, -ಈ ಕನ್ನೆಗೆ ಏನಾಯಿತು !

ನೀನು ಯಾಕೆ ವಿಲಾಪ ಮಾಡುತ್ತಿ? " ಎಂದು ಕೇಳಲು ಶ್ರೀಮಂತನು, -ಹೇ ಯತಿವರ್ಯ ನನ್ನ ದುಃಖವನ್ನು ನಿನಗೇನು ಹೇಳಲಿ ! ಸಿದ್ಧ ಭಕ್ತಿ ಗೆ ಹತ್ತಿದ ಕೂಡಲೇ, ನನ್ನ ಸಂಸಾರವೆಲ್ಲ ದುಃಖಮಯವಾಗಿ ಹೋಯಿತು. ಒಬ್ಬ ಸಾಧು ವಚನದ ಮೇಲೆ ವಿಶ್ವಾಸವಿಟ್ಟು, ಈ ಹುಡುಗಿಯು ಏಳು ದಿನಗಳಿಂದ ಕಠೋರ ವಚನಗಳನ್ನು ಕೇಳಿ, ಆ ಸಾಧುವು ತನ್ನ ಕಿವಿಯ ಮೇಲೆ ಕೈ ಇಟ್ಟು, -ಶಿವ ಶಿವಾ, ಶ್ರೀ ಸಿದ್ಧಾರೂಢರ ಮೇಲೆ ದುರ್ಧರವಾದ ಅಪವಾದವು ಬರುವಂಥಾದ್ದಾಯಿತಲ್ಲ. ಕಾಲಕರ್ಮ ವಶದಿಂದ ಈಕೆಗೆ ಮೃತ್ಯು ಬಂದಿದ್ದು, ಸದ್ಗುರುವಿನ ಮೇಲೆ ನಿಮಿತ್ಯ ಬಂತು, ಆತನ ಮೇಲೆ ನೀನು ದೋಷ ಹೊರಿಸಿ ನಿನ್ನ ಹಿತವನ್ನು ಕಳೆದುಕೊಳ್ಳವಿ ಆದರೆ ನನ್ನನ್ನು ಇಲ್ಲಿಗೆ ಕಳುಹಿಸಿರುವದರಿಂದ ಆತನು ಎಷ್ಟು ದಯಾಳನಿದ್ದಾನೆಂದು ನೀನೇ ನೋಡಿಕೋ, ಹೇಳುತ್ತೇನೆ ಕೇಳು. ಭಕ್ತರ ಮೇಲೆ ಸಿದ್ಧನಾಥನಿಗೆ ವಿಶೇಷ ದಯೆ ಇರುವದು, ನಿನ್ನೆ ದಿವಸ ಆತನಿಗೆ ಭೇಟಿಯಾದಾಗ ಆತನು ಹೇಳಿದ್ದು ಕೇಳಿ ನನಗೆ ಆಶ್ಚರ್ಯವಾಯಿತು. ನನ್ನನ್ನು ಕುರಿತು - "ಬಾರಪ್ಪಾ ಯತಿರಾಯಾ, ನಾಳೆ ನೀನು ಒಬ್ಬಾಕೆಯ

ಮರಣವನ್ನು ನೋಡುವಿ. ಅವಳ ಮುಖದಲ್ಲಿ ಈ

ವಿಭೂತಿಯನ್ನು ಹಾಕಿ ಅವಳನ್ನು ಬದುಕಿಸು." ಎಂದು ಆ

ಸದ್ಗುರುನಾಥನಂದನು. ಆ ಸಮಯದಲ್ಲಿ ಅದನ್ನು ನಾನು ಕೇಳಿ

ಚಕಿತನಾದೆ. ಆದರೆ ಆ ಮಾತು ಈಗ ನಿಜವಾಯಿತು. ಆ ಸಿದ್ದ

ಸಮರ್ಥನು ಸರ್ವಜ್ಞನಿರುವನು. ಆತನ ಕೃಪೆಯಿಂದ ಸತ್ತವಳು

ಈಗ ಬದುಕುವವಳು ," ಎಂದು ಹೇಳಿ ಆ ಯತಿಯು ತನ್ನ

ಬಟವೆಯೊಳಗಿಂದ ವಿಭೂತಿಯನ್ನು ತೆಗೆದು ಬಲಗೈಯಲ್ಲಿ

ಹಿಡಿದು, ಆ ಮೃತ್ಯುಹೊಂದಿದವಳನ್ನು ಕುರಿತು

ಮಾತಾಡುತ್ತಾನೇ - ಶ್ರೀ ಸದ್ಗುರು ಸಿದ್ಧಾರೂಢರ ಪ್ರಸಾದ

ವಿಭೂತಿಯನ್ನು ಸತ್ಯವಾಗಿ ಆತನ ಆಜ್ಞೆಯಿಂದ ನಿನ್ನ

ಮುಖದಲ್ಲಿ ಹಾಕುತ್ತೇನೆ. ತ್ವರೆಯಿಂದ ಏಳು," ಎಂದು ಅನ್ನುತ್ತ

ರುಕ್ಮಿಣಿಯ ಬಾಯಿಯೊಳಗೆ ವಿಭೂತಿಯನ್ನು ಹಾಕಿ ಸಿದ್ಧನಾಮ

ಗರ್ಜನೆಯನ್ನು ಮಾಡಿದನು. ರುಕ್ಮಿಣಿಯ ಈ ಭಯಂಕರವಾದ

ಮರಣವಾರ್ತೆಯನ್ನು ಕೇಳಿ ಅಸಂಖ್ಯಾತ ಜನರು ಕೂಡಿದ್ದರು.

ಅವರೆಲ್ಲರೂ ಈಗ ಅವಳನ್ನು ನೋಡುತ್ತಿರುವಾಗ

ಅದ್ಭುತವಾದ ಚಮತ್ಕಾರವಾಯಿತು. ಯತಿವರನು ಆಕೆಯ

ಬಾಯಿಯೊಳಗೆ ವಿಭೂತಿ ಹಾಕಿ ನಾಮಗರ್ಜನೆ ಮಾಡಿದಾಕ್ಷಣ, ರುಕ್ಮಿಣಿಯು ಕಣ್ಣು ತೆರೆದು ನೋಡುವಂಥವಳಾದಳು. ಶ್ರೀಮಂಥನಿಗೆ ಅತ್ಯಂತ ಹರ್ಷವಾಯಿತು. ಆತನು ಓಡಿ ಬಂದು, ಯತಿಯ ಚರಣಗಳನ್ನು ಹಿಡಿದನು. ರುಕ್ಮಿಣಿಯು ಆಗ ಎದ್ದು ಕುಳಿತಳು. ಇದನ್ನು ನೋಡಿ ಸರ್ವ ಜನರ ಮನಸ್ಸಿಗೆ ಆನಂದವಾಯಿತು. ಕೂಡಲೇ ಯತಿಯು ಅದೃಶ್ಯನಾದನು. ಇದನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟು - "ಈತನು ಸದ್ಗುರುವೇ ಮತ್ತೊಬ್ಬನಲ್ಲ,". ಎಂದು ಹೇಳುತ್ತ ಸಿದ್ಧನಾಮದಿಂದ ಗರ್ಜಿಸುವವರಾದರು ರುಕ್ಮಿಣಿಯ ತಾಯಿಯ ಮನೆಯಲ್ಲಿ ಇದ್ದಿಲ್ಲ, ಆದರೆ ಈಗ ಓಡಿ ಬಂದು, ಪುತ್ರಿಯನ್ನು ಅಪ್ಪಿ ಕೊಂಡು ಬಹು ಪ್ರೇಮದಿಂದ ಅಳುತ್ತಿರುವಳು. ರುಕ್ಮಿಣಿಯು ಸಶಕ್ತಳಾದ ಕೂಡಲೇ ಅವರೆಲ್ಲರೂ ಹುಬ್ಬಳ್ಳಿಗೆ ಹೋಗಿ ಅವಳನ್ನು ಬದುಕಿಸಿದ ಸಿದ್ಧಾರೂಢರ ದರ್ಶನವಾಗಬೇಕೆಂಬ ಹೇತುವಿನಿಂದ ಹೊರಟರು. ಸಿದ್ಧಾಶ್ರಮಕ್ಕೆ ಬಂದು, ಸಿದ್ಧಾರೂಢರಿಗೆ ನಮಸ್ಕಾರ ಮಾಡಿದ ಕೂಡಲೇ, ಅವರು ಶ್ರೀಮಂಥನಿಗೆ ಕೇಳುತ್ತಾರೆ - "ರುಕ್ಮಿಣಿಯ ಪ್ರಕೃತಿಯು ಈಗ

ಹ್ಯಾಗಿದೆ ?" ಸಿದ್ಧರಾಯರ ವಚನವನ್ನು ಕೇಳಿ, ಶ್ರೀಮಂತರು ತಾನು ಹೇಳುವ ಮೊದಲು ಈ ವರ್ತಮಾನವು ಇವರಿಗೆ ಹ್ಯಾಗೆ ತಿಳಿಯಿತು, ಎಂದು ಚಿಂತಿಸಿ ಆಶ್ಚರ್ಯಪಟ್ಟನು. ಆಮೇಲೆ ಹಣ್ಣು ಕಾಯಿ ಕಾಣಿಕೆ ಮುಂತಾದ್ದನ್ನು ಸದ್ಗುರುಗಳಿಗೆ ಅರ್ಪಿಸಿ, ರುಕ್ಮಿಣಿ ಅವರ ಚರಣಗಳಿಗೆ ಬಹು ಪ್ರೇಮದಿಂದ ಬಿದ್ದಳು. ಶ್ರೀಮಂತನೂ ಸಮೂಲವಾಗಿ ಅವಳ ವೃತ್ತಾಂತವನ್ನು ಸಿದ್ಧಾರೂಢರಿಗೆ ನಿವೇದಿಸಿ, -"ಹೇ ಕೃಪಾಳುವಾದ ಸಿದ್ಧನಾಥನೇ, ನೀನೇ ರುಕ್ಮಿಣಿಯನ್ನು ಬದುಕಿಸಿದವನಾದಿ. ಮತ್ತು ನಿನ್ನ ಭಕ್ತಿಯನ್ನು ನಮ್ಮಲ್ಲಿ ಉತ್ಪನ್ನ ಮಾಡಿಸಿ, ನಮ್ಮನ್ನಾದರೂ ಉದ್ಧರಿಸುವವನಾದಿ," ಎಂದು ಹೇಳಿದರು. ಸರ್ವರು ಇದನ್ನು ಕೇಳಿ ಜಯಜಯಕಾರ ಮಾಡಿ, ಸಿದ್ಧ ನಾಮವನ್ನು ಗರ್ಜಿಸುತ್ತಿದ್ದರು. ಅನಂತರ ಸದ್ಗುರು ಆಜ್ಞೆಯನ್ನು ಪಡೆದುಕೊಂಡು ಎಲ್ಲರೂ ಸ್ವಸ್ಥಾನಕ್ಕೆ ಹೋದರು. ಈಗ ಕಥೆಯ ಲಕ್ಷ್ಯಾರ್ಥವನ್ನು ಶ್ರವಣ ಮಾಡಿರಿ. ಶ್ರೀಮಂತನೇ ಮುಮುಕ್ಷು ಜೀವನು. ಅವನ ಪುತ್ರಿಯಾದ ರುಕ್ಮಿಣಿ ಸದ್ಭಕ್ತಿಯು. ಅವರಿಗೆ ಸಂಸಾರವೆಂಬ ಭಾರತದ ಬಾಧೆಯಾಗಿತ್ತು. ವೈರಾಗ್ಯನ

ಕೂಡ ಲಗ್ನವಾದ ಹೊರತು ಸದ್ಭಕ್ತಿಯಲಿ ಬಾಧೆಯು ಹೋಗಲಾರದೆಂದು, ಆ ಭೂತದ ಪೀಡೆಯಾದಾಗ ತನಗೆ ವಿವಾಹ ಮಾಡಬೇಕೆಂದು ಅವಳು ಹೇಳುತ್ತಿದ್ದಳು. ಆಗ ಶರಣಪ್ಪನೆಂಬ ಸದ್ಗುರು ಬಂದು ಅವಳಿಗೆ ನಾಮಸ್ಮರಣೆ ಮತ್ತು ಸಿದ್ಧಚರಿತ್ರದ ಪಾರಾಯಣವನ್ನು ಮಾಡಲಿಕ್ಕೆ ಹೇಳಿದನು. ಅದರಿಂದ ಸಂಸಾರ ಬಾಧೆಯು ಹೋಯಿತು. ಆದರೂ ಪ್ರಾರಬ್ಧ ಭೋಗವು ಅಡ್ಡ ಬಂದದ್ದರಿಂದ ಭಕ್ತಿಯು ಕಾಲವಶಳಾದಂತೆ ಕಾಣಿಸುತ್ತಿದ್ದರೂ, ಸದ್ಗುರು ಬಂದು ಭಕ್ತಿಗೆ ಚೇತರಿಸಿದ ಕೂಡಲೆ ಅವಳು ಸಶಕ್ತಳಾದಳು. ಶ್ರೀ ಸಿದ್ಧಾರೂಢ ಸದ್ಗುರುರಾಯನದೇ ಅದೆಲ್ಲ ಆಟವಿರುತ್ತದೆ. ಅಂತರವನ್ನು ನಿರ್ಮಲ ಮಾಡಿದ ಕ್ಷಣದಲ್ಲಿ ಸರ್ವತ್ರದಲ್ಲಿ ಆ ಗುರುದೇವನೇ ಕಾಣಿಸುವನು. ಅವನನ್ನು ಹೃದಯದಲ್ಲಿ ಸದಾ ಧ್ಯಾನ ಮಾಡುವುದರಿಂದ ಅಂತರಂಗವು ಶುದ್ಧವಾಗಿ ಒಳಹೊರಗೆ ಸರ್ವ ವಸ್ತುಗಳ ರೂಪದಿಂದ ಆತನೇ ಭಾಸಿಸುತ್ತಾನೆ. ಎಂಬಲ್ಲಿ ಶ್ರೀ ಸಿದ್ಧಾರೂಢ ಕಥಾಮೃತದೊಳ, ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಅತಿ ಮಧುರವಾದ ಈ ನಾಲ್ವತ್ತೆಂಟನೇ

*ಅಧ್ಯಾಯವನ್ನು ಶಿವದಾಸನು ಶ್ರೀ ಸಿದ್ಧಾರೂಢ ಸದ್ಗುರುಗಳ ಚರಣಾರವಿಂದಗಳಲ್ಲಿ ಅರ್ಪಿಸಿರುವನು.*